ವಾರ್ನಿಷ್ಣು, ಪೆನ್ಸಿಲ್ಲು, ಇತ್ಯಾದಿ. ಶಿವಶಂಕರನಿಗೆ ಅಲ್ಲಿ ಮೊದಲೇ ಕೆಲಸಕ್ಕಿದ್ದ ದೇವೇಂದ್ರ ಜೊತೆಯಾದ.

ಒಂದು ವಾರದ ನಂತರ ಶಿವಶಂಕರನಿಗೆ ಆ ಜೊತೆಗಾರನೂ ಬೇಕಾಗಲಿಲ್ಲ. ನಗರದ ರಸ್ತೆಗಳು ಭಾನುವಾರ ಬಿಟ್ಟು ಬೇರೆ ದಿನಗಳಲ್ಲಿ ಬೇರೆಯೇ ಆಗಿ ಕಾಣುತ್ತಿದ್ದವು. ಅಲ್ಲೊಂದು ಇಲ್ಲೊಂದು ಭೂತದಂತೆ ನಿಂತ ಮರಗಳು, ಹೆಂಚು ತಾರಸಿ ಮನೆಗಳು, ಅವುಗಳ ಬಣ್ಣಗೆಳೆದ ಕಾಂಪೌಂಡುಗಳು, ಮನೆಯ ಮುಂದಿನ ಗಾರ್ಡನ್ನುಗಳು... ಎಲ್ಲವೂ ನಡೆದು ಹೋಗುತ್ತಿರುವ ತನಗೆಂದೇ ಹತ್ತಿರ ಹತ್ತಿರ ಬಂದು ದೂರ ದೂರ ಹೋದಂತೆ... ಒಂದು ದಿನ ಅವನು ಕೊನೆಯೇ ಇಲ್ಲವೆನ್ನುವಂತೆ ತೋರಿದೊಂದು ಬೀದಿಯಲ್ಲಿ ನಡೆಯತೊಡಗಿದವನು ಒಂದರ್ಧ ಗಂಟೆಯೊಳಗೇ ಆ ಬೀದಿಯ ಕೊನೆ ಮುಟ್ಟಿಬಿಟ್ಟಿದ್ದ. ಅಲ್ಲೊಂದು ಬಸ್‌ಸ್ಟ್ಯಾಂಡು. ಹಳೆಯ ಹೊಸ ಕೆಂಪು ಬಸ್ಸುಗಳು ಯಾವಯಾವದೋ ಬಡಾವಣೆಯ ಬೋರ್ಡುಗಳನ್ನು ತೋರಿಸುತ್ತ ಅಲ್ಲಿಂದ ಹೊರಡುತ್ತಿದ್ದವು. ಅನೇಕರು ತಮತಮಗೆ ಬೇಕಾದ ಬಸ್ಸು ಹತ್ತುತ್ತಿದ್ದರು. ಅವನೂ ಒಂದು ಬಸ್ಸು ಹತ್ತಿದಾಗ ಅದು ಎಲ್ಲೆಲ್ಲೋ ನಿಂತು, ಹೊರಟು ಕಡೆಗೆ ಹಲಸೂರಿನ ಕೆರೆಯನ್ನು ಸಮೀಪಿಸಿತು. ಬಸ್ಸಿಂದ ಇಳಿದು ಆ ಕೆರೆಯನ್ನು ಒಂದು ಸುತ್ತು ಸುತ್ತಿದ. ಆಮೇಲೆ ಇನ್ನೊಂದು ಬಸ್ಸು ಕಬ್ಬನ್ ಪಾರ್ಕಿಗೆ ಕರೆದೊಯ್ದು, ಅಲ್ಲೇ ಹತ್ತಿರದ ವಿಧಾನಸೌಧವನ್ನು ತೋರಿಸಿತು. ಅವತ್ತು ಮಧ್ಯಾಹ್ನ ಅವನು ಹಿಡಿದದ್ದು ಲಾಲ್‌ಬಾಗಿಗೆ ಹೋಗುವ ಬಸ್ಸನ್ನು. ಲಾಲ್‌ಬಾಗಿನಲ್ಲಿ ಕೆರೆಯನ್ನು, ಗಿಡಮರಗಳನ್ನು, ಗುಲಾಬಿ ತೋಟವನ್ನು, ಜಿಂಕೆಗಳನ್ನು ನೋಡಿ ಕಣ್ಣು ದಣಿದ ಮೇಲೆ ಒಂದೆರಡು ಗಂಟೆ ಒಂದು ಬೆಂಚಿನ ಮೇಲೆ ಕೂತು ಎಲ್ಲೆಲ್ಲಿಂದಲೋ ಬಂದು ಕಣ್ಣರಳಿಸಿಕೊಂಡು ಸುತ್ತುತ್ತಿದ್ದವರನ್ನು ನೋಡಿದ. ಕತ್ತಲಾಗತೊಡಗಿದ್ದೇ ಮೇಲೆದ್ದು ಹೊರಟ.

ಅದೊಂದು ರಸ್ತೆಯಲ್ಲಿ ನಿಧಾನವಾಗಿ ಹೆಜ್ಜೆಯಿಡುತ್ತಿದ್ದಾಗ ಎದುರು ಸಾಲಿನ ಒಂದು ಮನೆಯ ಬಾಗಿಲಿನಲ್ಲಿ ಎರಡೂವರೆ ಮೂರು ವರ್ಷದ ಒಂದು ಮಗು ಕಾಣಿಸಿಕೊಂಡಿತು. ಗುಂಡುಗುಂಡಾದ, ಬಟ್ಟಲುಗಣ್ಣುಗಳ ಮಗು; ಮುಖಕ್ಕೆ ಮುಖವೇ ನಗುತ್ತಿದ್ದ ಪುಟಾಣಿ. ಅದರ ಮೈಬಣ್ಣಕ್ಕೆ ಹೊಂದಿಕೊಂಡಂತಿತ್ತು ಗುಲಾಬಿ ಬಣ್ಣದ ಫ್ರಾಕು. ಜಡೆಗಳನ್ನು ತಲೆ ಮೇಲಕ್ಕೆಳೆದು ಕ್ಲಿಪ್ಪು ಹಾಕಿದ್ದರು. ಅದು ಮನೆಯೊಳಗಿಂದ ಕಿಲಕಿಲನೆ ನಗುತ್ತಾ ಓಡಿ ಬಂದ ರಭಸಕ್ಕೆ ಆಯತಪ್ಪಿ ಮುಂಬಾಗಿಲ ಮೆಟ್ಟಿಲಿನಿಂದ ಬಿದ್ದು ಕಿಟಾರೆಂದು ಕಿರುಚಿಕೊಂಡಿತು. ತಲೆಗೆ ಪೆಟ್ಟಾಗಿ ತುಸು ರಕ್ತವೂ ಬಂದಿರಬೇಕು. ನಡುವಯಸ್ಸಿನ ಒಬ್ಬ ಹೆಂಗಸು ಅಯ್ಯೋ ಪುಟ್ಟಮ್ಮಾ ಎನ್ನುತ್ತಾ ದಡದಡನೆ ಓಡಿಬಂದು ಮಗುವನ್ನು ಎತ್ತಿಕೊಂಡವಳೇ ಅದನ್ನು ಎದೆಗವಚಿಕೊಂಡು ಮನೆಯೊಳಕ್ಕೆ ಹೋಗಿ ಬಾಗಿಲು ಹಾಕಿಕೊಂಡಳು.

ಶಿವಶಂಕರ ಇನ್ನೂ ಸ್ವಲ್ಪ ಹೊತ್ತು ಮುಚ್ಚಿಕೊಂಡ ಬಾಗಿಲನ್ನೇ ನೋಡುತ್ತ ನಿಂತಿದ್ದ. ಆ ಮನೆಗೆ ಸುಮಾರು ಮೂರು ಅಡಿ ಅಗಲದ ಮೂರು ಮೆಟ್ಟಿಲುಗಳಿದ್ದವು. ಮಧ್ಯದ ಮೆಟ್ಟಿಲ ಬಲಗಡೆಯ ಅಂಚು ಹೆಚ್ಚುಕಡಿಮೆ ಮುಕ್ಕಾಲು ಭಾಗ ಕಿತ್ತುಹೋಗಿತ್ತು. ಮಗು ಬೀಳುವುದಕ್ಕೆ ಅದೇ ಕಾರಣವಾಗಿರಬೇಕು.

ಶಿವಶಂಕರ ರಸ್ತೆಗೆ ಅಂಟಿಕೊಂಡಂತಿದ್ದ ಸಣ್ಣ ಫುಟ್‌ಪಾತಿನಲ್ಲಿ ಯಾರದೋ ಒತ್ತಾಯವಿದೆಯೆನ್ನುವಂತೆ, ಏನನ್ನೋ ಕಳೆದುಕೊಂಡವನಂತೆ ನಡೆದ ನಡೆದ ನಡೆದ. ಒಂದು ಕಡೆ ಕಾಕಾ ಅಂಗಡಿಯಲ್ಲೊಂದು ಟೀ ಕುಡಿದು ಸುಮಾರು ದೂರ ನಡೆಯುತ್ತ ಹೋದ ಮೇಲೆ ಜನರಿಂದ ಗಿಜಿಗಿಜಿ ಎನ್ನುತ್ತಿದ್ದ ಸಣ್ಣ ಬೀದಿಯೊಂದರಲ್ಲಿ ಕಾಲಿಟ್ಟ. ಯಾವುದೋ ಹಬ್ಬವೋ ಹರಿದಿನವೋ ಇರಬೇಕು, ಹತ್ತಾರು ಮಾರು ದೂರದಲ್ಲಿದ್ದ ದೇವಸ್ಥಾನದಲ್ಲಿ ಗಂಟೆಗಳು ಮೊಳಗುತ್ತಿದ್ದವು. ಹಗಲಲ್ಲೂ ಬಣ್ಣಬಣ್ಣದ ನೂರಾರು ದೀಪಗಳನ್ನು ಬೆಳಗಿಸುತ್ತಿದ್ದ ಅಂಗಡಿಗಳು ಜನರಿಂದ ತುಂಬಿ ತುಳುಕುತ್ತಿದ್ದವು. ಬಲೂನುಗಳು, ಟೇಪುಗಳು, ಹಣ್ಣು ತರಕಾರಿ ತುಂಬಿಕೊಂಡ ತಳ್ಳುಗಾಡಿಗಳು, ಹಳೇ ಪುಸ್ತಕಗಳನ್ನು ಹರಡಿಟ್ಟ ಫುಟ್‌ಪಾತುಗಳು, ಜನರನ್ನು ಚದುರಿಸುವ ಸೈಕಲ್ಲು ಸ್ಕೂಟರು ಆಟೋಗಳು, ಇವೆಲ್ಲವನ್ನೂ ಶಿವಶಂಕರ ಸ್ವತಃ ಒಂದು ಕ್ಯಾಮೆರಾ ಆಗಿ ಗ್ರಹಿಸಿದ. ಅವನ ಕಿವಿಗಳಂತೂ ಬಗೆಬಗೆಯ ಸದ್ದುಗಳನ್ನು ಧ್ವನಿಮುದ್ರಣ ಮಾಡಿಕೊಂಡವು. ಒಂದು ಮರದಡಿಯ ಅಂಗಡಿಯಲ್ಲಿ ಹೂವು ಕೊಳ್ಳುತ್ತಿದ್ದ ನಡುವಯಸ್ಸಿನ ಹೆಂಗಸು ಇದ್ದಕ್ಕಿದ್ದಂತೆ ಕಿರುಚಿಕೊಂಡಳು. ಯಾರೋ ಅವಳ ಚಿನ್ನದ ಸರ